**ದಿನಾಂಕಃ 24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ BMK ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲ ಸಂಗತಿಗಳು ಸತ್ಯ ಇರುತ್ತವೆ ಮತ್ತು ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ ಎಂದು ಪ್ರಮಾಣಿಕರಿಸುತ್ತೇನೆ.

1. ಫಾರ್ಮ್ ಜಿಎಸಟಿ ನೋಂದಾವಣಿ ಪ್ರಮಾಣ ಪತ್ರವನ್ನು (03 ಪುಟಗಳು) ನಿಪಿ-1 ಎಂದು,
2. ದಿಃ 01-04-2023 ರಿಂದ ದಿಃ 31-03-2024 ರ ಬ್ಯಾಲೆನ್ಸ ಸ್ಟೇಟ್ಮೆಂಟನ ಯಥಾ ನಕಲನ್ನು ನಿಪಿ-2 ಎಂದು,
3. ದಿಃ 28-04-2025 ರ ಬಾಕಿ ಹಣದ ಬಗ್ಗೆ ಸಿಎ ರವರು ಕೊಟ್ಟ ಪ್ರಮಾಣ ಪತ್ರವನ್ನು ನಿಪಿ-3 ಎಂದು,
4. ದಿಃ 09-04-2025 ರ ವಕೀಲರ ನೋಟಿಸನ ಕಚೇರಿ ಪ್ರತಿಯನ್ನು ನಿಪಿ-4 ಎಂದು,
5. ಅಂಚೆ ರಸೀದಿಯನ್ನು ನಿಪಿ-5 ಎಂದು ,
6. ವಾಪಸ್ ಆದ ಅಂಚೆ ಲಕೋಟೆಯನ್ನು ಸ್ವೀಕೃತಿಯೊಂದಿಗೆ ನಿಪಿ-6 ಎಂದು ಮತ್ತು ಅದರಲ್ಲಿ ಇರುವ ನೋಟಿಸನ್ನು ನಿಪಿ-6(ಎ) ಎಂದು ಗುರುತಿಸಿಕೊಂಡಿರುತ್ತಾರೆ.
   (ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೇಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಅಂತ ಒಪ್ಪಿಕೊಂಡಿರುತ್ತಾರೆ)

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿಜೆಎಂ**
**ನ್ಯಾಯಾಧೀಶರು, ರಾಯಚೂರು.**